ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಕೃಷಿ ಹವಾಮಾನ ವಿಭಾಗ

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು–65

ರಾಗುಟ್ಟಹಳ್ಳಿಯ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ: 6.03.15

ಈ ವಾರದ ಮುನ್ಸೂಚನೆ (7-03-15 to 11.03.15 ವರೆಗೆ)

ನಿಯತಾಂಕಗಳು	07.03.15	08.03.15	09.03.15	10.03.15	11.03.15
ಮಳೆ (ಮಿ ಮಿ)	8	6	0	0	0
ಗರಿಷ್ಠ ಉಷ್ಣಾಂಶ(ಡಿ.ಸೆ.)	31	30	30	31	31
ಕನಿಷ್ಠ ಉಷ್ಣಾಂಶ (ಡಿ.ಸೆ.)	20	21	20	20	21
ಮೋಡ (ಪ್ರಮಾಣ)	2	3	1	1	0
ಅರ್ದ್ರತೆ ೭.೨೦ ಬೆ (ಶೇ)	80	85	87	88	90
ಅರ್ದ್ರತೆ ೨.೨೦ ಮ (ಶೇ)	40	44	45	42	50
ಗಾಳಿಯ ವೇಗ (ಕಿ.ಮಿ/ಗಂಟೆಗೆ)	7	9	8	7	8
ಗಾಳಿಯ ದಿಕ್ಕು (ಡಿಗ್ರಿ)	160	140	150	135	130

ಈ ವಾರದ ಮುನ್ಸೂಚನೆಯ ಪ್ರಕಾರ ಚಿಕ್ಕಬಳ್ಳಾಪುರ ಹಾಗೂ ಸುತ್ತಮುತ್ತ ಮುಂದಿನ ದಿನಗಳಲ್ಲಿ ಮೋಡ ಕವಿದ ವಾತಾವರಣ ಮುಂದುವರಿಯಲಿದ್ದು ಸಾಧಾರಣ ಅಥವಾ ತುಂತುರು ಮಳೆಯಾಗುವ ಸಾಧ್ಯತೆಯಿದೆ. ದಿನದ ಗರಿಷ್ಠ ಉಷ್ಣಾಂಶವು 30.0–31.0^{o}C ಮತ್ತು ಕನಿಷ್ಠ 20-21^{o}C ಇರಲಿದೆ. ಬೆಳಿಗಿನ ಆರ್ದ್ರತೆ ಪ್ರಮಾಣ ಶೇ 80–90% ಇದ್ದು, ಮಧ್ಯಾಹ್ನ 40–50% ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ 7–9 ಕಿ.ಮೀ.ವೇಗದಲ್ಲಿ ಬೀಸುವ ಸ0ಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

ಸಾಮಾನ್ಯ ಸೂಚನೆಗಳು:

- ಹಣ್ಣಿನ ಮರಗಳ ತೋಟದಲ್ಲಿ (ಮಾವು, ಸೀಬೆ) ನೆಲಕ್ಕೆ ತಾಕುವ ರೆಂಬೆ ಕೊಂಬೆಗಳನ್ನು ಕತ್ತರಿಸಿ ಕೀಟ ರೋಗಗಳಿಂದ ರಕ್ಷಿಸುವುದು.
- ಆಕಾಲಿಕ ಮಳೆಯನ್ನು ಸದ್ಬಳಕೆ ಮಾಡಿಕೊಂಡು ಭೂಮಿ ಉಳುಮೆ ಮಾಡುವುದರಿಂದ, ನೀರು ಮಣ್ಣಿನಲ್ಲಿ ಚೆನ್ನಾಗಿ ಹಿಂಗುತ್ತದೆ , ಕಳೆ, ಕೀಟ ಮತ್ತು ರೋಗ ಭಾದೆ ಕಡಿಮೆಯಾಗುತ್ತದೆ.

ಮಾರ್ಚ್ ತಿಂಗಳಲ್ಲಿ ಬೆಳೆಯಬಹುದಾದ ಬೆಳೆ ಹಾಗೂ ತಳಿಗಳು:

ಶಕ್ತಿಮಾನ್ ಮುಸುಕಿನ ಜೋಳ: ಸಿ.ಎಸ್.ಹೆಚ್–5, ಸಿ.ಎಸ್.ಹೆಚ್– 9.

ಅವರೆ: ಹೆಚ್,ಎ.–3, ಹೆಚ್,ಎ.–4.

ಟೊಮ್ಯಾಟೊ: ಅಭಿನವ್, ಅರ್ಕಾ ಸಾಮ್ರಾಟ್, ಪಿ.ಕೆ.ಎಮ್–೧

ರಾಗಿ: ಇಂಡಾಫ್ಲ್–9,

ಪಾಪ್‌ಕಾರ್ನ್: ಅಂಬರ್. **ಅಲಸಂದೆ:** ಸಿ–೧೫೨, ಪಿ.ಕೆ.ಬಿ.–೪ (ತರಕಾರಿಗಾಗಿ)

ಕೋಳಿ ಸಾಕಣೆ ಹಾಗೂ ರೇಷ್ಮೆ ಕೃಷಿ: ಸರಿಯಾದ ತಾಪಮಾನವನ್ನು ನಿರ್ವಹಣೆ ಮಾಡಬೇಕು

ಸಸ್ಯ ಸಂರಕ್ಷಣೆ:

ಮೋಡ ಕವಿದ ವಾತಾವರಣ ಇರುವುದರಿಂದ ತರಕಾರಿಗಳಲ್ಲಿ ಕಂಡುಬರುವ ಬೂಜು ರೋಗ ನಿ0ಯಂತ್ರಣಕ್ಕೆ ರಿಡೊಮಿಲ್/**Ridomil** (2 ಗ್ರಾಂ/ಪ್ರತಿ ಲೀಟರ್ ನೀರಿಗೆ) ಅಥವಾ ಮೆಲೊಡಿ ಡಿ0ಯೊ/**Melody Duo** (3 ಮಿ.ಲೀ/ಪ್ರತಿ ಲೀಟರ್ ನೀರಿಗೆ) ಬೆರೆಸಿ ಸಿಂಪಡಿಸುವುದು.

ರಸ ಹೀರುವ ಕೀಟಗಳ ನಿ0ಯಂತ್ರಣಕ್ಕೆ 5% ಬೇವಿನ ಕಷಾಯ ಅಥವಾ **Blaze**/ಬ್ಲೇಜ್ (1.5–2ಗ್ರಾಂ/ಪ್ರತಿ ಲೀಟರ್ ನೀರಿಗೆ) ಸಿಂಪಡಿಸಿ.

ಆಲೂಗಡ್ಡೆ: ಕೊನೆ ಅಂಗಮಾರಿ ರೋಗ ತೀವ್ರವಾಗಿ ಕಂಡುಬಂದರೆ ಸೈಮೊಕ್ಸಾನಿಲ್+ಮ್ಯಾಂಕೊಜೆಬ್ ಅಥವಾ ರಿಡೊಮಿಲ್ ಗೋಲ್ಡ್ (೨ ಗ್ರಾಂ ಪ್ರತಿ ಲೀಟರ್ ನೀರಿಗೆ) ಅನ್ನು ಸಿಂಪಡಿಸಿ.

ಬೂದಿ ರೋಗ ಹರಡಲು ಇದು ಸೂಕ್ತ ಕಾಲವಾಗಿರುವುದರಿಂದ ಸಲ್ಫೆಕ್ಸ್ (ಗಂಧಕ) ಅನ್ನು ಸಿಂಪಡಿಸಲು ಸೂಚಿಸಲಾಗಿದೆ. ಮಳೆ ಇಲ್ಲದಿದಲ್ಲಿ ಸಿಂಪಡಿಸುವುದು ಉತ್ತಮ.

ನೋಡಲ್ ಅಧಿಕಾರಿ:
ಕೃಷಿ ಹವಾಮಾನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು